# ಕರ್ನಾಟಕ ಸರ್ಕಾರ :: ಕಾರ್ಮಿಕ ಇಲಾಖೆ

## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಯಶವಂತಪುರ ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಕೆ ಪಾವತಿಸುವ ವಿವಿಧ ಕ್ಷೇತ್ರಗಳಾದ ಕಾರ್ಖಾನೆಗಳು/ಕಾರ್ಯಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ವಲಯದ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಕಾರ್ಮಿಕ ಕಲ್ಯಾಣ ಯೋಜನೆಗಳು ಜಾರಿಯಲ್ಲಿರುತ್ತವೆ.

### ಅಧ್ಯಾಯ-4

### ಸೆಕ್ಷನ್ 4 (1) (ಬಿ) (iv) ಅಧಿಕಾರ ಮತ್ತು ಪಾಲಿಸಬೇಕಾದ ಮಾರ್ಗಸೂಚಿಗಳು

## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಕಲ್ಯಾಣ ಯೋಜನೆಗಳು

1. ಕಲ್ಯಾಣ ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ವರ್ಷ ಜನವರಿ 1 ರಿಂದ ಜನವರಿ 15ನೇ ತಾರೀಖಿನೊಳಗೆ ಕಾರ್ಮಿಕರಿಂದ ರೂ.50/- ಹಾಗೂ ಮಾಲೀಕರು ರೂ.100/- ರಂತೆ ಒಬ್ಬ ಕಾರ್ಮಿಕನಿಗೆ ಒಟ್ಟು ರೂ. 150/- ಗಳಂತೆ ಕಾರ್ಮಿಕ ಕಲ್ಯಾಣ ನಿಧಿ ವಂತಿಕೆಯನ್ನು ಆನ್‌ಲೈನ್ ಮೂಲಕ ಪಾವತಿಸಿರಬೇಕು.
2. ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳು/ಕಾರ್ಯಸಂಸ್ಥೆಗಳು https://klwbapps.karnataka.gov.in URL ಇಲ್ಲಿ ನೊಂದಾಯಿಸಿ ಆನ್‌ಲೈನ್ ಮೂಲಕ ವಂತಿಕೆ ಪಾವತಿ ಮಾಡಬೇಕಾಗಿರುತ್ತದೆ.
3. ಶೈಕ್ಷಣಿಕ ಪ್ರೋತ್ಸಾಹ ಸಹಾಯಧನ ಪಡೆಯಲು ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು, ಕಾರ್ಖಾನೆಗಳು/ಕಾರ್ಯಸಂಸ್ಥೆಗಳು https://klwbapps.karnataka.gov.in URL ಇಲ್ಲಿ ನೊಂದಾಯಿಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

**ಶೈಕ್ಷಣಿಕ ಪ್ರೋತ್ಸಾಹ ಸಹಾಯಧನ ಕಲ್ಯಾಣ ಯೋಜನೆಗೆ ಕಾರ್ಮಿಕರ ಮಾಸಿಕ ವೇತನ ರೂ. 35,000/- ಮೀರಿರಬಾರದು.**

1. **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಸಹಾಯಧನ :** ಪ್ರೌಢಶಾಲೆ, (8 ರಿಂದ 10ನೇ ತರಗತಿವರೆಗೆ) ರೂ.6,000/-, ಪಿಯುಸಿ/ಡಿಪ್ಲೊಮಾ/ಐಟಿಐ/ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.8,000/-, ಪದವಿ ಶಿಕ್ಷಣಕ್ಕಾಗಿ ರೂ.10,000/-, ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.12,000/-, ಇಂಜಿನೀಯರಿಂಗ್/ವೈದ್ಯಕೀಯ ಶಿಕ್ಷಣಕ್ಕಾಗಿ ರೂ.20,000/-ಗಳ ಪ್ರೋತ್ಸಾಹ ಸಹಾಯಧನ ನೀಡಲಾಗುವುದು. **(ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50 ಹಾಗೂ ಪ.ಜಾತಿ. / ಪ. ಪಂಗಡದ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು. ಒಂದು ಕುಟುಂಬದಲ್ಲಿ ಇಬ್ಬರು ಮಕ್ಕಳಿಗೆ (ವಿದ್ಯಾರ್ಥಿಗಳಿಗೆ) ಮಾತ್ರ ಈ ಸೌಲಭ್ಯ ನೀಡಲಾಗುವುದು)**

**ಈ ಕೆಳಗಿನ ಕಲ್ಯಾಣ ಯೋಜನೆಗಳಿಗೆ ಕಾರ್ಮಿಕರ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18-60 ವರ್ಷದೊಳಗೆ ಇರಬೇಕು.**

2. **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಸಹಾಯಧನ :** ಈ ಯೋಜನೆಯ ಸೌಲಭ್ಯ ಪಡೆಯಲು ಮೃತರ ಕುಟುಂಬದ ಅವಲಂಬಿತರು ಕಾರ್ಮಿಕರು ಮೃತಪಟ್ಟ 6 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸಂಬಂಪಟ್ಟ ಸಂಸ್ಥೆಗಳು ಹಾಗೂ ಕಾರ್ಖಾನೆಗಳು/ಕಾರ್ಯಸಂಸ್ಥೆಗಳ ಮುಖಾಂತರ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, **ರೂ. 20,000/-** ಸಹಾಯಧನ ನೀಡಲಾಗುವುದು.
3. **ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ ಸಹಾಯಧನ :** ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ತಲಾ **ರೂ. 10,000/-** ಗಳಂತೆ ಸಹಾಯ ಧನ ನೀಡಲಾಗುವುದು. ಮಗು ಜನಿಸಿದ 6 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸಂಬಂಪಟ್ಟ ಸಂಸ್ಥೆಗಳು ಹಾಗೂ ಕಾರ್ಖಾನೆಗಳು/ಕಾರ್ಯಸಂಸ್ಥೆಗಳ ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.
4. **ಕಾರ್ಮಿಕರಿಗೆ ವೈದ್ಯಕೀಯ ನೆರವು :** ಹೃದಯ ಶಸ್ತ್ರಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಶನ್, ಕ್ಯಾನ್ಸರ್, ಆಂಜಿಯೋಪ್ಲಾಸ್ಟಿ, ಕಣ್ಣು, ಆರ್ಥೋಪೆಡಿಕ್, ಗರ್ಭ ಕೋಶದ ಶಸ್ತ್ರ ಚಿಕಿತ್ಸೆ, ಲಿವರ್, ಹರ್ನಿಯ, ಕಿವಿ ಹಾಗೂ ಕಿಡ್ನಿ ಕಲ್ಲುಗಳ ಶಸ್ತ್ರಚಿಕಿತ್ಸೆಗಳಿಗೆ ಕನಿಷ್ಠ **ರೂ. 1,000/-** ರಿಂದ ಗರಿಷ್ಠ **ರೂ.25,000/-** ವರೆಗೆ ಮತ್ತು ಪ್ರತಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆಗೆ **ರೂ.500/- ರಿಂದ ರೂ.1000/-** ವರೆಗೆ ಸಹಾಯ ಧನ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಚಿಕಿತ್ಸೆ ಪಡೆದ 6 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸಂಬಂಪಟ್ಟ ಸಂಸ್ಥೆಗಳು ಹಾಗೂ ಕಾರ್ಖಾನೆಗಳು/ಕಾರ್ಯಸಂಸ್ಥೆಗಳ ಮುಖಾಂತರ ಮೂಲ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.
5. **ಕಾರ್ಮಿಕರಿಗೆ ಅಪಘಾತ ಸಹಾಯಧನ :** ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಅಪಘಾತವಾದಲ್ಲಿ ಕನಿಷ್ಠ **ರೂ. 1,000/-** ರಿಂದ ಗರಿಷ್ಠ **ರೂ. 10,000/-** ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ವೈದ್ಯಕೀಯ ದಾಖಲೆಗಳೊಂದಿಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸಂಬಂಪಟ್ಟ ಸಂಸ್ಥೆಗಳು ಹಾಗೂ ಕಾರ್ಖಾನೆಗಳು/ಕಾರ್ಯಸಂಸ್ಥೆಗಳ ಮುಖಾಂತರ ಮೂಲ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.
6. **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಸಹಾಯಧನ :** ಸಂಘಟಿತ ವಲಯದ ಕಾರ್ಮಿಕರ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ನೊಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ **ರೂ. 1,00,000/-** ಸಹಾಯಧನ ನೀಡಲಾಗುವುದು.
7. **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಸಹಾಯಧನ :** ಸಂಘಟಿತ ವಲಯದ ಕಾರ್ಮಿಕರ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ನೊಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ ರೂ. 1,00,000/- ಸಹಾಯಧನ ನೀಡಲಾಗುವುದು.

**ಸಹಾಯಧನವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ನೇರವಾಗಿ NEFT/RTGS ಮೂಲಕ ಜಮಾ ಮಾಡಲಾಗುವುದು**

**ಕಲ್ಯಾಣ ಆಯುಕ್ತರು**

ಕಾರ್ಮಿಕ ಕಲ್ಯಾಣ ಭವನ ನಂ.48, 2ನೇ,ಮಹಡಿ ಮತ್ತೀಕೆರೆ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು-560022.
ದೂರವಾಣಿ ಸಂಖ್ಯೆ : 080-23475188, 8277291175,8277120505,9141602562.
Website : www.klwb.karnataka.gov.in E-mail : welfarecommissioner123@gmail.com

## Govt of Karnataka :: Department of Labour

## Karnataka Labour Welfare Board, Bangalore

The Karnataka Labour Welfare Fund is constituted for financing and conducting activities to promote the welfare of contributing employees covered under the KLWF Act, 1965. The employees working in various Factories/Establishments and their dependents and children are eligible for the following welfare schemes.

## Labour Welfare Schemes

1. Every year between 1st January to 15th of January each employee has to contribute Rs.50/- and Rs. 100/- by employer for each employee i.e. Rs. 150/- for each employee is to be remitted by the employer to the Welfare Fund.
2. For the payment of Welfare Fund Factories/Establishments should register themselves in https://klwbapps.karnataka.gov.in URL and make payment online.
3. For Educational assistance to children of the Labours: Students, Educational institutions, Factories/Establishments should register themselves in https://klwbapps.karnataka.gov.in URL and apply scholarship online.

**FOLLOWING BENEFIT IS AVAILABLE TO WORKERS DRAWING MONTHLY SALARY OF RS 35,000/- AND BELOW ONLY**

1. **Educational assistance to children of the workers:** For High School (8th to 10th std) Rs.6,000/- PUC /ITI/Dip./TCH courses Rs. 8,000/- Degree courses Rs. 10,000/- Post Graduation courses. Rs. 12,000/- & Engineering/ Medical courses Rs. 20,000/- {Eligibility for applying 50% marks for General category candidates and 45% for SC/ST category candidates. Assistance will be paid to Two students (children) from each family.}

**FOLLOWING BENEFITS ARE AVAILABLE TO WORKERS WITHOUT WAGE LIMIT AND THE AGE LIMIT IS BETWEEN 18-60 YEARS**

2. **Funeral Expenses:** Financial assistance of Rs. 20,000/- will be paid to the deceased Workers dependents. The application is to be submitted within 6 months of death of worker through concerned Factories/Establishments.
3. **Maternity benefit for women workers:** Financial assistance of Rs 10,000/- will be paid as maternity Benefit for working women for first 2 Children. The application along with original records is to be submitted within 6 months of Delivery through concerned Factories/Establishments.
4. **Medical Assistance:** Minimum of Rs. 1,000/- and maximum of Rs.25,000/- of financial assistance will be paid as Medical assistance to workers for treatment of major ailments viz., Heart operation, Kidney transplantation, Cancer treatment, Angioplasty, Eye, Ear, Liver, Hernia, Orthopaedic, Uterus operations, Gall bladder Operations, Kidney stone removal, Brain haemorrhage and Rs. 500/- to Rs. 1000/- will be paid for medical check-up for each worker. The application is to be submitted along with original medical records within 6 months of occurrence of accident through concerned Factories/Establishments.
5. **Accident Benefit:** Accident benefit of Rs. 1,000/- to Rs. 10,000/- will be paid to workers who met with accidents at work place. The application is to be submitted along with original medical records within 3 months of occurrence of accident through concerned Factories/Establishments.
6. **Medical Check-up Camps conducted by the Trade Unions Registered for Organized Sector Workers** : Rs. 1,00,000/- Financial Assistance will be paid for conducting annual medical check-up camps conducted by the Trade Unions for Organized sector workers with prior approval from the Welfare Commissioner.
7. **Annual Sports activity conducted by the Trade Unions Registered for Organized Sector Workers:** Rs. 1,00,000/- Financial Assistance will be paid for annual Sports activity conducted by registered Trade Unions for Organized sector workers with prior approval from the Welfare Commissioner.

**Financial assistance for the beneficiaries will be deposited directly to their Bank Account through NEFT/RTGS**

Welfare Commissioner

Karmika Kalyan Bhavan no.48. 2nd floor Mathikere main road, yeshwanthpur Bangalore-560022.
Phone no. 080-23475188, 8277291175, 8277120505, 9141602562.
Website : www.klwb.karnataka.gov.in E-mail : welfarecommissioner123@gmail.com